ಆರ್.ಎಸ್.ಬಿ.ವೈ	2011–12	96,20,460
	2012–13	45,13,72,085
	2013–14	31,58,36,288
ಎನ್‌ಪಿಎಸ್ ಲೈಟ್ ಸ್ವಾವಲಂಬನ್ ಯೋಜನೆ	2011–12	62,42,000
	2012–13	77,15,000
	2013–14	102,49,000

ಈ) ಪ್ರಗತಿಯಲ್ಲಿರುವ ಯೋಜನೆಗಳು

1. ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ.
2. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಸೌಲಭ್ಯಗಳು
3. ಕಾರ್ಮಿಕರ ಕಲ್ಯಾಣ ಮಂಡಳಿ ಯೋಜನೆ.
4. ಎನ್‌ಪಿಎಸ್ ಲೈಟ್ ಸ್ವಾವಲಂಬನ್ ಯೋಜನೆ.
5. ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆ.

ಜಾತಿ ಪ್ರಮಾಣ ಪತ್ರ ವಿತರಣೆ

2078 (2690); ಶ್ರೀ ಅರವಿಂದ ಲಿಂಬಾವಳಿ (ಮಹದೇವಪುರ)

ಅ) ರಾಜ್ಯದಲ್ಲಿ ನಕಲಿ ಜಾತಿ ಹಾಗೂ ಆದಾಯ ಪ್ರಮಾಣ ಪತ್ರಗಳನ್ನು ವಿತರಿಸುವ ಜಾಲ ಪತ್ತೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಎಲ್ಲೆಲ್ಲಿ ಪ್ರಕರಣಗಳು ಪತ್ತೆಯಾಗಿವೆ; ಇದಕ್ಕೆ ಕಾರಣಗಳೇನು: (ಜಿಲ್ಲಾವಾರು ವಿವರ ಒದಗಿಸುವುದು):

ಆ) ಸದರಿ ಪ್ರಮಾಣ ಪತ್ರಗಳನ್ನು ಪಡೆಯಲು ಹಾಲಿ ಇರುವ ನಿಯಮ, ಮಾನದಂಡಗಳೇನು; ಇವುಗಳನ್ನು ಉಲ್ಲಂಘಿಸಲಾಗುತ್ತಿದೆಯೇ; ಇದಕ್ಕೆ ಕಾರಣ ಯಾರ್ಯಾರು;

ಇ) ಒಬ್ಬೊಬ್ಬರಿಗೆ ಎರಡೆರಡು ಪ್ರಮಾಣ ಪತ್ರಗಳನ್ನು ವಿತರಿಸುವ ಹಗರಣ ಬೆಳಕಿಗೆ ಬಂದಿದೆಯೇ: ಈ ಎಲ್ಲಾ ಪ್ರಮಾಣ ಪತ್ರವನ್ನು ಪಡೆಯಲು

ಅನುಸರಿಸುವ ಕ್ರಮಗಳನ್ನು ಸರಿಯಾಗಿ ಪಾಲಿಸದಿರುವುದರಿಂದ ಈ ರೀತಿ ಆಗುತ್ತಿದೆಯೇ: ಕಾರಣ ನೀಡುವುದು.

ಈ) ಶಿಕ್ಷಣಕ್ಕೆ ಉದ್ಯೋಗಕ್ಕೆ ಹಾಗೂ ಚುನಾವಣೆಗೆ ಸ್ಪರ್ಧಿಸಲು ಮೀಸಲಾತಿ ಅವಕಾಶ ಸೇರಿದಂತೆ ಇನ್ನಿತರ ಕಾರಣಗಳಿಗಾಗಿ ಇಂತಹ ಜಾತಿ ಹಾಗೂ ಆದಾಯ ಪ್ರಮಾಣ ಪತ್ರವನ್ನು ಪಡೆಯಲು ಬೇರೆ ಬೇರೆ ಕ್ರಮಗಳನ್ನು ಅಳವಡಿಸಿಕೊಳ್ಳಾಗಿದೆಯೇ;

ಉ) ಇದರಲ್ಲಿ ಏಜೆಂಟರುಗಳ ಕೈವಾಡದ ಜೊತೆಗೆ, ತಾಲ್ಲೂಕು ಕಛೇರಿಗಳ ಅಧಿಕಾರಿ–ನೌಕರರು ಕೈಜೋಡಿಸಿರುವ ಶಂಕೆ ಸರ್ಕಾರಕ್ಕಿದೆಯೇ; ಹಾಗಿದ್ದಲ್ಲಿ ಈ ನಿಟ್ಟಿನಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ; ಅದೇ ರೀತಿ ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದು ನೌಕರಿಯು ಸೇರಿದಂತೆ ಸರ್ಕಾರಿ ಸೌಲಭ್ಯ ಪಡೆದ ಪ್ರಕರಣಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)

ಶ್ರೀ ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)

ಅ) 2009 ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆಯಡಿಯಲ್ಲಿ (ಆರ್.ಟಿ.ಇ) ಶಾಲೆಗಳಿಗೆ ಪ್ರವೇಶ ಹೊಂದಲು ನಗರ ಪ್ರದೇಶದ ವಿದ್ಯಾರ್ಥಿಗಳಿಗೆ ನಾಡಕಛೇರಿಗಳಿಂದ ನೀಡಲಾಗುತ್ತಿರುವ ನಕಲಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳ ಸತ್ಯಾಸತ್ಯತೆಯ ಬಗ್ಗೆ ರಾಜ್ಯ ಹಾಗೂ ರಾಷ್ಟ್ರಮಟ್ಟದ ದಿನಪತ್ರಿಕೆ ಹಾಗೂ ಸುದ್ದಿವಾಹಿನಿಗಳಲ್ಲಿ ಮೇಲಿಂದ ಮೇಲೆ ಸುದ್ದಿ ಪ್ರಸಾರವಾಗುತ್ತಿದ್ದ ಹಿನ್ನೆಲೆಯಲ್ಲಿ ಸದರಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳ ಸತ್ಯಾಸತ್ಯತೆಯ ಬಗ್ಗೆ ಪರಿಶೀಲಿಸುವಂತೆ ಲೋಕಾಯುಕ್ತ ಪೊಲೀಸರನ್ನು ಕೋರಲಾಗಿತ್ತು. ಆದರೆ ಕರ್ನಾಟಕ ಲೋಕಾಯುಕ್ತ ಪೊಲೀಸರಿಗೆ ದಾಳಿ, ಟ್ರ್ಯಾಪ್ ಹಾಗೂ ನ್ಯಾಯಾಲಯ ಸೂಚಿತ ಪ್ರಕರಣಗಳ ತನಿಖಾ ಕೆಲಸಗಳು ಹೆಚ್ಚಾಗಿದ್ದು, ಈ ನಕಲಿ ಜಾತಿ ಮತ್ತು ಆದಾಯ ದೃಢೀಕರಣ ಪತ್ರಗಳ ಸತ್ಯಾಸತ್ಯತೆ ಬಗ್ಗೆ ತನಿಖೆ ನಡೆಸಲು ಲೋಕಾಯುಕ್ತ ಪ್ರಾಧಿಕಾರಕ್ಕೆ ಅಸಾಧ್ಯವಾಗಿರುತ್ತದೆಂದು ಅಭಿಪ್ರಾಯ

ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ಈ ಬಗ್ಗೆ ತಾಲ್ಲೂಕು ಹಂತದಲ್ಲಿಯೇ ತನಿಖೆ ನಡೆಸುವಂತೆ ಕ್ರಮ ವಹಿಸಲು ಪರಿಶೀಲಿಸಲಾಗುತ್ತಿದೆ.

ಆ) ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳಿಗಾಗಿ ಸಾರ್ವಜನಿಕರಿಂದ ಅಟಲ್‌ಜೀ ಜನಸ್ನೇಹಿ ಕೇಂದ್ರದಲ್ಲಿ ಅರ್ಜಿಗಳನ್ನು ತಂತ್ರಾಂಶದ ಮೂಲಕ ಸ್ವೀಕರಿಸಲಾಗುತ್ತಿದೆ. ಅವುಗಳನ್ನು ಕರ್ನಾಟಕ ಅನುಸೂಚಿತ ಜಾತಿಗಳು, ಬುಡಕಟ್ಟುಗಳು, ಹಿಂದುಳಿದ ವರ್ಗಗಳ ನೇಮಕಾತಿ, ಮೀಸಲಾತಿ ಅಧಿನಿಯಮ 1990 ಮತ್ತು ಅದರಡಿ ರಚಿಸಲಾದ ನಿಯಮಗಳು ಮತ್ತು ತಿದ್ದುಪಡಿಗಳ (ದಿ:28.02.2009ರಲ್ಲಿದ್ದಂತೆ) ಅನ್ವಯ ನಿಮಯಾನುಸಾರ ಕಂದಾಯ ನಿರೀಕ್ಷಕರಿಂದ ಕ್ಷೇತ್ರ ಪರಿಶೀಲನೆಗೊಳಪಡಿಸಲಾಗುತ್ತದೆ. ತದನಂತರ ಅನುಮೋದಿತ ಜಾತಿ ಪ್ರಮಾಣ ಪತ್ರವನ್ನು ತಹಶೀಲ್ದಾರರು ವಿದ್ಯುನ್ಮಾನವಾಗಿ ಸಹಿ ಮಾಡಿ ಹಾಗೂ ಆದಾಯ ಪ್ರಮಾಣ ಪತ್ರವನ್ನು ನಾಡಕಛೇರಿಯ ಉಪ ತಹಶೀಲ್ದಾರರು ವಿದ್ಯುನ್ಮಾನವಾಗಿ ಸಹಿ ಮಾಡಿ ಅರ್ಜಿದಾರರಿಗೆ ನಿಯಮಾನುಸಾರ ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ವಿತರಿಸಲಾಗುತ್ತಿದೆ.

ಇ) ಇಂತಹ ಯಾವುದೇ ನಿರ್ದಿಷ್ಟವಾದ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ) ಶಿಕ್ಷಣ ಮತ್ತು ಉದ್ಯೋಗಕ್ಕೆ ಸಂಬಂಧಿಸಿದಂತೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ವಿತರಿಸುವ ಕಾರ್ಯವಿಧಾನ ಒಂದೇ ಮಾದರಿಯಾಗಿರುತ್ತದೆ. ಆದರೆ, ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ಎರಡು ಬೇರೆ ಬೇರೆ ಪ್ರಮಾಣ ಪತ್ರಗಳನ್ನು ಪ್ರತ್ಯೇಕವಾಗಿ ಸಾರ್ವಜನಿಕರಿಗೆ ವಿತರಿಸಲಾಗುತ್ತಿದೆ. 2014–15ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳಿಗೆ ಶಾಲಾಮುಖೇನವಾಗಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ವಿತರಿಸಲು, ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಶಾಲೆಯಲ್ಲಿಯೇ ಪಡೆದು ಅವುಗಳನ್ನು ನಾಡಕಛೇರಿ ಮತ್ತು ತಾಲ್ಲೂಕು ಕಛೇರಿಗಳಲ್ಲಿ ಸಂಸ್ಕರಿಸಿ, ಅನುಮೋದಿಸಿದ ಪ್ರಮಾಣ

ಪತ್ರಗಳನ್ನು ಮುದ್ರಿಸಿ, ಲ್ಯಾಮಿನೇಷನ್ ಮಾಡಿಸಿ ಶಾಲೆಗಳಿಗೆ ವಿತರಿಸಲಾಗುತ್ತಿದೆ. ಚುನಾವಣೆಗೆ ಸ್ಪರ್ಧಿಸಲು ಮೀಸಲಾತಿ ಅವಕಾಶಕ್ಕೆ ಸಂಬಂಧಿಸಿದಂತೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನೀಡಲು ಯಾವುದೇ ಬೇರೆ ಬೇರೆ ಕ್ರಮವನ್ನು ಅಟಲ್‌ಜೀ ಜನಸ್ನೇಹಿ ತಂತ್ರಾಂಶದಲ್ಲಿ ಅಳವಡಿಸಲಾಗಿರುವುದಿಲ್ಲ.

ಊ) ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದು ನೌಕರಿ ಪಡೆದ ಪ್ರಕರಣಗಳ ಮಾಹಿತಿಯನ್ನು ಅನುಬಂಧ–ಅ ನಲ್ಲಿ ಲಗತ್ತಿಸಿದೆ.

ಅನುಬಂಧ– ಅ

ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದವರ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಮೊಕದ್ದಮೆಗಳ ಜಿಲ್ಲಾವಾರು ಅಂಕಿ ಅಂಶ

ಕ್ರ.ಸಂ	ಜಿಲ್ಲೆಯ ಹೆಸರು	ಪ್ರಕರಣಗಳ ಸಂಖ್ಯೆ	ಒಟ್ಟು ಪ್ರಕರಣಗಳ ಸಂಖ್ಯೆ
1	ಬೆಂಗಳೂರು ಕೇಂದ್ರ		76
	ಬೆಂಗಳೂರು ನಗರ	76	
2	ಬೆಂಗಳೂರು ಪ್ರಾದೇಶಿಕ		42
	ಬೆಂಗಳೂರು ನಗರ	18	
	ಬೆಂಗಳೂರು ಗ್ರಾಮಾಂತರ	1	
	ತುಮಕೂರು	15	
	ಕೋಲಾರ	6	
	ಚಿಕ್ಕಬಳ್ಳಾಪುರ	1	
	(ಮಂಡ್ಯ ಜಿಲ್ಲೆ ಪ್ರಕರಣ ಸೇರಿ)	1	

3	ಬೆಳಗಾಂ ಪ್ರಾದೇಶಿಕ		31
	ಬೆಳಗಾವಿ	11	
	ಬಿಜಾಪುರ	4	
	ಬಾಗಲಕೋಟೆ	4	
	ಧಾರವಾಡ	9	
	ಹಾವೇರಿ	3	
4	ಮೈಸೂರು ಪ್ರಾದೇಶಿಕ		19
	ಮಂಡ್ಯ	4	
	ಮೈಸೂರು	9	
	ಕೊಡಗು	1	
	ಚಾಮರಾಜನಗರ	3	
	ಹಾಸನ	2	
5	ಮಂಗಳೂರು ಪ್ರಾದೇಶಿಕ		144
	ಉತ್ತರ ಕನ್ನಡ	55	
	ಚಿಕ್ಕಮಗಳೂರು	38	
	ಉಡುಪಿ	32	
	ದಕ್ಷಿಣ ಕನ್ನಡ	19	
6	ದಾವಣಗೆರೆ ಪ್ರಾದೇಶಿಕ		92
	ದಾವಣಗೆರೆ	11	

	ಶಿವಮೊಗ್ಗ	59	
	ಚಿತ್ರದುರ್ಗ	10	
	ಬಳ್ಳಾರಿ	12	
7	ಗುಲ್ಬರ್ಗಾ ಪ್ರಾದೇಶಿಕ		101
	ಗುಲ್ಬರ್ಗಾ	63	
	ಬೀದರ್	16	
	ಯಾದಗಿರಿ	4	
	ರಾಯಚೂರು	9	
	ಕೊಪ್ಪಳ	9	
	ಒಟ್ಟು	**505**	**505**

ಬರ ಹಾಗೂ ಮಳೆಯಿಂದ ಹಾನಿ

2079(2691); ಶ್ರೀ ಅರವಿಂದ ಲಿಂಬಾವಳಿ (ಮಹದೇವಪುರ)

ಅ) ರಾಜ್ಯದಲ್ಲಿ ಕಳೆದ 3–4 ತಿಂಗಳಿಂದ ತೀವ್ರತರದ ಬರ ಹಾಗೂ ಮಳೆ ಅಭಾವದಿಂದ (ಅತಿವೃಷ್ಟಿ–ಅನಾವೃಷ್ಟಿ) ಬಾಧಿತವಾದ ಪ್ರದೇಶಗಳನ್ನು ಗುರುತಿಸಿ ಅಗತ್ಯ ನೆರವು ನೀಡುವ ಪ್ರಕ್ರಿಯೆ ನಡೆದಿದೆಯೇ; (ಜಿಲ್ಲಾವಾರು ವಿವರ ನೀಡುವುದು);

ಆ) ತೀವ್ರ ಬರ, ನೀರಿನ ಕ್ಷಾಮದ ಜೊತೆಗೆ ಅತೀ ಮಳೆಯಿಂದ ಉಂಟಾದಂತಹ ಹಾನಿಯ ಪ್ರಮಾಣದ ವಿವರಗಳನ್ನು ಹಾಗೂ ಇದಕ್ಕೆ ರಾಜ್ಯ ಸರ್ಕಾರ ಸ್ಪಂದಿಸಿ ಬಿಡುಗಡೆ ಮಾಡಿದ ಪರಿಹಾರದ ಮೊತ್ತವೆಷ್ಟು (ವಿವರಗಳನ್ನು ನೀಡುವುದು);